ಮಾಡಿ ಅವರ ಮೇಲಿರುವ ಪೋಲೀಸ್ ಕೇಸನ್ನು ವಾಪಸ್ಸು ತೆಗೆದುಕೊಳ್ಳುವಂತೆ ಮಾಡಬೇಕು Will you withdraw those police cases ?

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೇ, ಶ್ರೀ ಧರ್ಮಸಿಂಗ್‌ರವರು ಮತ್ತು ಕೆ. ಬಿ. ಶಾಣಪ್ಪನವರು ಕಾರ್ಮಿಕ ಇಲಾಖೆಯಲ್ಲಿ ಬರತಕ್ಕಂತಹ ಕಾನೂನುಗಳನ್ನು ತಿಳಿದಿದ್ದು ಮತ್ತೆ ಏಕೆ ಅವರನ್ನು ಅರೆಸ್ಟ್ ಮಾಡಿಲ್ಲಮೆದು ಹೇಳುತ್ತಿದ್ದಾರೆ. ನಮ್ಮಲ್ಲಿ ಅರೆಸ್ಟ್ ಮಾಡತಕ್ಕಂತ ಕಾನೂನು ಇಲ್ಲ. ನಾವು ಮಾಡತಕ್ಕಂತದ್ದು ಏನೆಂದರೆ ಫ್ಯಾಕ್ಟರಿ ಆಕ್ಟ್‌ನಲ್ಲಿ ಯಾವರೀತಿ ಅವರು ಕೆಲಸ ಮಾಡ ಬೇಕಾಗುತ್ತದೆಯೋ ಆ ರೀತಿ ಅವರು ಕೆಲಸವನ್ನು ಮಾಡಬೇಕು, ಹಾಗಿಲ್ಲದೆ ಅವರು ಕಾನೂನು ನಿಯಮಗಳನ್ನು ಉಲ್ಲಂಘನೆ ಮಾಡಿದರೆ ನಾವು ಮಾಲೀಕವರ್ಗದವರ ಮೇಲೆ ಕೇಸ್ ಹಾಕುತ್ತೇವೆ. ಅವಕ್ಕೆ ಈಗಾಲೇ ಕೇಸ್ ಹಾಕುವುದಕ್ಕೆ ಅವರಿಗೆ ಶೋಕಾಸ್ ನೋಟಿಸ್‌ನ್ನು ಕೊಟ್ಟಿದ್ದೇವೆ. ಅದನ್ನು ಬಿಟ್ಟು ನಾವು ಬೇರೆ ಏನನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅವರ ಮನೆಯವರಿಗೆ ಮಾಲೀಕವರ್ಗದವರ ಮೇಲೆ ಸಂಶಯ ಇದ್ದರೆ ಮೃತನ ಕುಟುಂಬ ವರ್ಗದವರು ಅವರ ಮೇಲೆ ಕೇಸ್ ಮಾಡಬಹುದು.

ಅಧ್ಯಕ್ಷರು.—ಮಾನ್ಯ ಶಾಣಪ್ಪನವರೇ, ನೀವು ೫-೬ ಬಾರಿ ಕೇಳಿದ್ದೀರಿ. ಒಂದು ಲಿಮಿಟ್ ಇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದೇ ಒಂದು ಪ್ರಶ್ನೆ.....

ಅಧ್ಯಕ್ಷರು.—ನಾನು ಅವಕಾಶವನ್ನು ಕೊಡುವುದಿಲ್ಲ. ಈಗ ೩ಗಿಳಿರ ನಿಯಮದ ಮೇರೆಗೆ ಚರ್ಚೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಂಪಾಸಿಬಲ್ ಅಂದರೂ ತಾವು ಪಾಸಿಬಲ್ ಎಂದರೆ ಕೇಳಬಹುದು.

ಅಧ್ಯಕ್ಷರು.—ಮಾನ್ಯ ಶಾಣಪ್ಪನವರೇ, ೫-೬ ಬಾರಿ ಅವಕಾಶ ಕೊಟ್ಟಿದ್ದೇನೆ. ಮತ್ತೆ ಕೇಳಬೇಡಿ.

ಶ್ರೀ ಎಸ್. ಬಂಗಾರಪ್ಪ.—ನೀವು ಇಂಪಾಸಿಬಲ್ ಎಂದು ಎಲ್ಲಿ ಮನಸ್ಸು ಮಾಡುತ್ತೀರೋ ಎಂದು ನನಗೆ ಹೆದರಿಕೆ ಆಗಿತ್ತು.

ಅಧ್ಯಕ್ಷರು.—ನೀವು ಲೇಬರ್ ಲೀಡರ್ಸ್. ಅವರೂ ಲೇಬರ್ ಲೀಡರ್ಸ್, ಇದನ್ನು ಬಗೆಹರಿಸ ಬಹುದು.

ಶ್ರೀ ಎಸ್. ಕೆ. ಕಾಂತ.—ಈ ಬಗ್ಗೆ Home Department...ನಿಂದ enquire ಮಾಡಿದ್ದೇವೆ. ಮಾನ್ಯ ಜಾಲಪ್ಪನವರು ಉತ್ತರ ಕೊಡಬಹುದು.

ನಿಯಮ ೩ಗಿಳಿರ ಮೇರೆಗೆ

ಅಧ್ಯಕ್ಷರು.—ಶ್ರೀ ಗೋಪಾಲ ಮುಕುಂದ ಕಾನಡೆ (ಗೈರು ಹಾಜರಿ)

(೧) ಉಳ್ಳಾಲದ ಪೋಲೀಸ್ ಸ್ಟೇಷನ್‌ಗೆ ಕಟ್ಟಡ ಇಲ್ಲದಿರುವುದು

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಉಳ್ಳಾಲದ ಪೋಲೀಸ್ ಸ್ಟೇಷನ್ ಅನೇಕ ಕಾಲದಿಂದ ಬಾಡಿಗೆ ಕಟ್ಟಡದಲ್ಲಿದೆ. ಇಲ್ಲಿನ ಪೋಲೀಸ್ ಸಿಬ್ಬಂದಿಗಳಿಗೆ ಕ್ವಾರ್ಟರ್ಸ್‌ಗಳೂ ಇಲ್ಲ. ಸುಮಾರು ಒಂದು ಲಕ್ಷ ಜನರು ಇರುವ, ಸುಮಾರು ೧೫ ದೊಡ್ಡ ಗ್ರಾಮಗಳು ಈ ಸ್ಟೇಷನಿಗೆ ಒಳಪಟ್ಟಿರುತ್ತದೆ. ಆ ಪ್ರಯುಕ್ತ ಮೂರು ವರ್ಷಗಳ ಹಿಂದೆ ಎರಡೂವರೆ ಎಕರೆ ಜಮೀನನ್ನು ಪೋಲೀಸ್ ಸ್ಟೇಷನ್ ಮತ್ತು ಪೋಲೀಸ್ ವಸತಿಗಳಿಗಾಗಿ ವಿಾಸಲಾಗಿ ತೆಗೆದಿರಿಸಲಾಗಿದೆ. ಇನ್ನೂ ಸ್ಟೇಷನ್ ಕಟ್ಟಲು ಪ್ರಾರಂಭಿಸಿಲ್ಲ. ಒಮ್ಮೆ ಟೆಂಡರ್ ಕರೆದು ಇದನ್ನು ನಿಲ್ಲಿಸಿ ಬಿಡಲಾಗಿದೆ. ಹಿಂದಿನ ಗೃಹ ಸಚಿವರು ಅತೀ ಅಗತ್ಯದ ಈ ಸ್ಟೇಷನನ್ನು ೧೯೮೭ ರಲ್ಲಿ ಕಟ್ಟಿಸಿಕೊಡಲಾಗುವುದೆಂಮ ತಿಳಿಸಿದ್ದರು. ಆದರೆ ಅತೀ ಪ್ರಾಮುಖ್ಯವಾದ ಉಳ್ಳಾಲ ಪೋಲೀಸ್ ಸ್ಟೇಷನ್ ಕಟ್ಟುವ ಕೆಲಸ ಆರಂಭವಾಗಿಲ್ಲ. ಆದಷ್ಟು ಶೀಘ್ರ ಇದನ್ನು ಕಟ್ಟಿಸಿ ಕೊಡಬೇಕೆಂಬ ಕುರಿತು ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ಗೃಹ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಉಳ್ಳಾಲ ಪೋಲೀಸ್ ಠಾಣೆಗೆ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ೩ ಜನ ಮುಖ್ಯ ಪೇದೆ ಮತ್ತು ೯ ಜನ ಪೋಲೀಸ್ ಪೇದೆಗಳ ಪಂಜೂರಾತಿ ಇದೆ. ಈಗ ಸದ್ಯಕ್ಕೆ ಶೇಕಡ ೪೪ ರಷ್ಟು ಮಂದಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಸತಿ ಗೃಹಗಳನ್ನು ಒದಗಿಸಲಾಗಿದೆ. ಇದೂ ಅಲ್ಲದೇ ೧೪೪ ವಸತಿ ಗೃಹಗಳ ನಿರ್ಮಾಣ ಕಾರ್ಯವು ವಿವಿಧ ಹಂತದಲ್ಲಿ ನಡೆಯುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಉಳಿದ ಪೋಲೀಸ್ ಸಿಬ್ಬಂದಿ ವರ್ಗಕ್ಕೆ ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮವು ತನ್ನ ಹಂತ ಹಂತದ ಯೋಜನೆಯಲ್ಲಿ ವಸತಿ ಗೃಹಗಳ ನಿರ್ಮಾಣವನ್ನು ತೆಗೆದುಕೊಳ್ಳುವುದು.

ಉಳ್ಳಾಲದ ಪೋಲೀಸ್ ಠಾಣೆಯ ಕಟ್ಟಡ ಮತ್ತು ಪೋಲೀಸ್ ಸಿಬ್ಬಂದಿ ವರ್ಗಗಳ ವಸತಿ ಗೃಹಗಳ ನಿರ್ಮಾಣ ಕಾರ್ಯವನ್ನೂ ಸಹ ತನ್ನ ಹಂತ ಹಂತದ ಯೋಜನೆಯಲ್ಲಿ ನಿಗಮವು ತೆಗೆದು ಕೊಳ್ಳುವುದು. ಆರ್ಥಿಕ ಮುಗಟ್ಟಿನಿಂದಾಗಿ ಸದರಿ ಕೆಲಸವನ್ನು ಈವರೆವಿಗೂ ತೆಗೆದುಕೊಳ್ಳಲಾಗಲಿಲ್ಲ.

ಶ್ರೀ ಆರ್. ರಾಮಯ್ಯ.—(ಗೈರು ಹಾಜರಿ)

ಶ್ರೀ ವಸಂತ ಬಂಗೇರಾ.—(ಗೈರು ಹಾಜರಿ)

(೨) ಉಡುಪಿ ತಾಲ್ಲೂಕಿನ ನಿರುದ್ಯೋಗಿ ಯುವಕರಿಗೆ ರಿಕ್ಷಾ ಪರ್ಮಿಟ್ ಸಿಗುವಂತೆ ಮಾಡುವುದು

† ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕಿನ ಅನೇಕ ನಿರುದ್ಯೋಗಿ ಯುವಕರು ತಮ್ಮ ಸ್ವಂತ ಉದ್ಯೋಗಕ್ಕಾಗಿ (ರಿಕ್ಷಾ ಚಲಾಯಿಸುವ) ಆದಕ್ಕೆ ಬೇಕಾಗುವ ಲೈಸೆನ್ಸು ಬ್ಯಾಂಕಿನ ಮೂಲಕ ಸಾಲ ಪಡೆದು ರಿಕ್ಷಾ ಪರ್ಮಿಟ್‌ಗೋಸ್ಕರ ಪೇಚಾಡುತ್ತಿದ್ದಾರೆ. ಈ ತನಕ ಅಂತಹ ಯುವಕರಿಗೆ ರಿಕ್ಷಾ ಪರ್ಮಿಟ್ ಸಿಗದೆ ನಿರಾಶೆಯಲ್ಲಿದ್ದಾರೆ. ಸರ್ಕಾರವು ಈ ವಿಚಾರ ವನ್ನು ಪರಿಶೀಲಿಸಿ ಕೂಡಲೇ ಆ ಯುವಕರಿಗೆ ರಿಕ್ಷಾ ಪರ್ಮಿಟ್ ಸಿಗುವಂತೆ ಮಾಡಬೇಕೆಂದು ನಾನು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಸಾರಿಗೆ ಮಂತ್ರಿಗಳ ಪರವಾಗಿ).—ಉಡುಪಿ ತಾಲ್ಲೂಕಿನಲ್ಲಿ ಆಟೋ ರಿಕ್ಷಾ ಪರವಾನಿಗೆ ಕೊಡುವ ಬಗ್ಗೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ ದಿನಾಂಕ ೨೧-೮-೧೯೮೫ರಲ್ಲಿ ವಿವರ ವಾಗಿ ಚರ್ಚಿಸಿ ಅಲ್ಲಿ ಈಗಾಗಲೇ ಕೊಟ್ಟಿರುವ ಪರವಾನಿಗೆಗಳು ಜಾಸ್ತಿಯಾಗಿರುವುದರಿಂದ ಹೊಸ ಆಟೋ ರಿಕ್ಷಾ ಪರವಾನಿಗೆಗಳನ್ನು ಕೊಡುವುದನ್ನು ನಿಲ್ಲಿಸಲಾಯಿತು. ಉಡುಪಿಯಲ್ಲಿ ಒಟ್ಟು ಕೊಡುವ ಪರವಾನಿಗೆ ಸಂಖ್ಯೆಯನ್ನು ೧೨೦೦ಕ್ಕೆ ನಿಲ್ಲಿಸುವುದೆಂದು ತೀರ್ಮಾನಿಸಲಾಯಿತು. ಆದರೆ ೧೨೦೦ ರಲ್ಲಿ ಒಟ್ಟು ೩೫೦ ಜನರು ಮಂಜೂರಾದ ಪರವಾನಿಗೆಯನ್ನು ತೆಗೆದುಕೊಳ್ಳಲಿಲ್ಲ. ಅನಂತರ ಶಾಸಕರಾದ ಶ್ರೀಮತಿ ಮನೋರಮಾ ಮಧ್ವರಾಜ್ ಅವರ ಪತ್ರದ ದಿನಾಂಕ ೧೩-೧೨-೧೯೮೬ರ ಪ್ರಕಾರ, ಈ ವಿಷಯವನ್ನು ಇನ್ನೊಮ್ಮೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮುಂದೆ ಚರ್ಚಿಸಲಾಯಿತು. ಉಡುಪಿ ನಗರ ವ್ಯಾಪ್ತಿಯಲ್ಲಿ ಆಟೋ ರಿಕ್ಷಾಗಳು ಜಾಸ್ತಿಯಿದ್ದು, ಇನ್ನೂ ಹೆಚ್ಚಿಸಿದರೆ ಸಂಚಾರಕ್ಕೆ ಅಡತಡೆ ಉಂಟಾಗಬಹುದೆಂಬ ಉದ್ದೇಶದಿಂದ ಉಡುಪಿ ನಗರದ ವ್ಯಾಪ್ತಿಯನ್ನ ಬಿಟ್ಟು, ಉಡುಪಿ ತಾಲ್ಲೂಕಿನ ಇತರ ಪಟ್ಟಣಗಳನ್ನು ಕೇಂದ್ರ ಸ್ಥಾನವಾಗಿ ಇಟ್ಟುಕೊಂಡು ಪರವಾನಿಗೆ ಕೊಡುವ ಬಗ್ಗೆ ಪರಿಶೀಲಿಸಲು ನಿರ್ಣಯ ಕೈಗೊಳ್ಳಲಾಯಿತು. ಈ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಉಡುಪಿ ಅವರಿಗೆ ವಿವರವಾದ ತನಿಖೆ ನಡೆಸಿ ಉಡುಪಿ ನಗರವನ್ನು ಹೊರತುಪಡಿಸಿ ತಾಲ್ಲೂಕಿನ ಇತರ ಪಟ್ಟಣಗಳಲ್ಲಿ ಒಟ್ಟು ೩೫೦ಕ್ಕೂ ಮೀರದಂತೆ ಎಷ್ಟು ಆಟೋ ರಿಕ್ಷಾಗಳ ಅವಶ್ಯಕತೆ ಇದೆಯೆಂದು ವರದಿ ಕೊಡುವಂತೆ ದಿನಾಂಕ ೧೫-೫-೧೯೮೭ರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯಲ್ಲಿ ಆದೇಶ ನೀಡಲಾಯಿತು. ಈ ಬಗ್ಗೆ ದಿನಾಂಕ ೨೧-೮-೧೯೮೭ ರಂದು ಕಾಪು ಶಾಸಕರಾದ ಮಾನ್ಯ ವಸಂತ ವಿ. ಶಾಲಿಯಾನ ಇವರು ಪ್ರಾಧಿಕಾರದ ಸಭೆಯಲ್ಲಿ ಹಾಜರಾಗಿ ಈ ಬಗ್ಗೆಯೂ ಕೇಳಿದ್ದರು. ಕಾರಣ ಈ ವಿಷಯವನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ ಉಡುಪಿ ಇವರ ಗಮನಕ್ಕೆ ತರಲಾಗಿದೆ ಮತ್ತು ಇದೇ ದಿನಾಂಕ ೧೮-೯-೧೯೮೭ ರಂದು ನಡೆಯಲಿರುವ ಪ್ರಾಧಿಕಾರದ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.